# ಸ್ನೇಹ ಪ್ರೀತಿಯ ಸಂಕೇತ ಸಂಕ್ರಾಂತಿ

ಭಾರತದಲ್ಲಿ ಆಚರಿಸುವ ಅನೇಕ ಹಬ್ಬಗಳಲ್ಲಿ 'ಸಂಕ್ರಾಂತಿ' ಗೆ ತನ್ನದೇ ಆದ ವಿಶೇಷತೆ ಮತ್ತು ಆಧ್ಯಾತ್ಮಿಕ ಹಿನ್ನಲೆ ಇದೆ. ಈ ಹಬ್ಬವು ಪ್ರತಿ ವರ್ಷ ಜನವರಿ ಮಾಸದ 14 ಅಥವಾ 15 ಬರುತ್ತದೆ. ಉತ್ತರ ಭಾರತದಲ್ಲಿ 'ಮಕರ ಸಂಕ್ರಾಂತಿ', ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ 'ಸಂಕ್ರಾಂತಿ', ಮಹಾರಾಷ್ಟ್ರದಲ್ಲಿ 'ಸಂಕ್ರಾಂತಿ', ತಮಿಳುನಾಡಿನಲ್ಲಿ 'ಪೊಂಗಲ್'(ಹೊಸ ವರ್ಷದ ಹಬ್ಬ) ಎಂದು, ರಾಜಸ್ಥಾನ, ಹರಿಯಾಣ, ದೆಹಲಿ ಇಲೆಲ್ಲಾ ಮಕರ ಸಂಕ್ರಾಂತಿ ಆಚರಿಸಲಾಗುತ್ತದೆ. ಭಾರತದಲ್ಲಿ ಇಲ್ಲ ಕಡೆಯೂ ಈ ಹಬ್ಬವನ್ನು ಒಂದಲ್ಲ ಒಂದು ಹೆಸರಿನಿಂದ ಆಚರಿಸುವ ರೂಢಿ ಇದೆ. ಈ ಹಬ್ಬದ ಮೊದಲನೆ ದಿನ 'ಭೋಗಿ' ಮಾರನೇ ದಿನ 'ಕರಿ' ಎಂದು ಹೇಳಲಾಗುತ್ತದೆ. ಸೂರ್ಯನು ಕರ್ಕರಾಶಿಯಿಂದ ಮಕರರಾಶಿಗೆ ಪ್ರವೇಶಿಸುವ ದಿನವೇ 'ಮಕರ ಸಂಕ್ರಾಂತಿ'. ಭೋಗಿ ಹಬ್ಬಕ್ಕೆ ಋತುರಾಜ ಇಂದ್ರನಿಗೆ ಪೂಜಿಸಿದರೇ, ಸಂಕ್ರಾಂತಿಗೆ ಸೂರ್ಯನಿಗೆ ಪೂಜಿಸಲಾಗುತ್ತದೆ

ಭೋಗಿ ಹಬ್ಬಕ್ಕೆ ಸಜ್ಜಿಗೆ ರೊಟ್ಟಿ, ಬದನೆಕಾಯಿ ಪಲ್ಲೆ ವಿಶೇಷವಾಗಿ ಮಾಡಿದರೆ, ಸಂಕ್ರಾಂತಿಯ ದಿನ ಎಳ್ಳು ಮಿಶ್ರಿ ಸ್ನಾನ, ಸಿಹಿ ಭೊಜನ ಮಾಡುವುದು ರೂಢಿಯಲ್ಲಿದೆ. ಕಬ್ಬು, ಎಳ್ಳು, ಬೆಲ್ಲ, ಸಜ್ಜೆ, ಗಜ್ಜರಿ, ಕಡಲೆ, ಮುಂತಾದ ಸೇವನೆಯು ಚಳಿಗಾಲದಲ್ಲಿ ದೈಹಿಕ ಆರೋಗ್ಯದ ದೃಷ್ಟಿಯಿಂದ ಹಿತಕರ. ಅಂದು ವಿಶೇಷವಾಗಿ ನದಿ, ಕೆರೆ, ಅಥವಾ ಹಳ್ಳಗಳಲ್ಲಿ ಸ್ನಾನವನ್ನು ಮಾಡುತ್ತಾರೆ. ಪುಣ್ಯಕ್ಷೇತ್ರಕ್ಕೆ ಹೊಗುತ್ತಾರೆ. ದಾನ ಧರ್ಮ ವನ್ನು ಮಾಡಿದಾಗ 'ಸಂಕ್ರಾಂತಿ ಪುರುಷ" ಒಳ್ಳೆಯ ಫಲವನ್ನು ನೀಡುವನು ಎಂದು ನಂಬುತ್ತಾರೆ. ಸಂಕ್ರಾಂತಿಯ ದಿನ ಪರಸ್ಪರ ಭೇಟಿಯಾಗಿ ಎಳ್ಳು-ಬೆಲ್ಲವನ್ನು ಕೊಟ್ಟು, ಒಳ್ಳೆಯದನ್ನೇ ಮಾತನಾಡಿ ಎಂದು ಹೇಳುತ್ತಾರೆ. ಆಧುನಿಕ ಜಗತ್ತಿನಲ್ಲಿ ಎಳ್ಳು ಬೆಲ್ಲದ ಸ್ಥಾನವನ್ನು ಸಕ್ಕರೆ ಪಾಕದಿಂದ ತಯಾರಿಸಿದ 'ಕುಸರೆಳ್ಳು' ಪಡೆದುಕೊಂಡಿದೆ.

ಭಾರತೀಯ ಪ್ರತಿಯೊಂದು ಹಬ್ಬಗಳ ಆಚರಣೆಯ ಹಿನ್ನಲೆಯಲ್ಲಿ, ಜಾತಿ, ಮತ, ವರ್ಣ ಭಾಷೆಭೇದ ಗಳೆಲ್ಲವನ್ನು ಮರೆತು ಸ್ನೇಹ, ಪ್ರೀತಿ, ಮಧುರತೆ, ಭ್ರಾತೃತ್ವದ ಭಾವನೆಗಳಿಗೆ ಹೆಚ್ಚಿನ ಮಹತ್ವ ಕೊಡಲಾಗಿದೆ. ಎಳ್ಳು ಸ್ನೇಹ, ಪ್ರೀತಿಯ ಸಂಕೇತವಾಗಿದ್ದರೆ, ಬೆಲ್ಲ ಸಿಹಿ, ಮಧುರತೆಯ ಪ್ರತೀಕವಾಗಿದೆ. ನಮ್ಮಲ್ಲಿ ಪ್ರೀತಿ, ಸ್ನೇಹ ಬೆಳೆಯಬೇಕೆಂದರೆ, ನಾವು ನಮ್ಮ ದೇಹದ ಧರ್ಮಗಳನ್ನು ಮರೆತು, ವಿಶ್ವಕ್ಕೆ ಒಡೆಯನಾಗಿರುವ ಒಬ್ಬ ನಿರಾಕಾರ ಭಗವಂತನ ಮಕ್ಕಳು, ಅಲ್ಲಾ, ಖುದಾ, ಗಾಡ್, ಈಶ್ವರನ ಸಂತಾನರು, ಜಾತಿಯಲ್ಲದ ಪರಮಜ್ಯೋತಿಯ, ದಿವ್ಯ ಜ್ಯೋತಿಗಳು ನಾವು ಎಂದು ತಿಳಿದು ವ್ಯವಹರಿಸಬೇಕಾಗಿದೆ. ಮಹಾತ್ಮ ಬಸವಣ್ಣನವರ ವಚನದಲ್ಲಿರುವ 'ಇವನಾರವ ಇವನಾರವ ಎಂದೆಣಿಸದಿರಯ್ಯ, ಇವನಮ್ಮವ ಇವನಮ್ಮವ' ಎಂದು ತಿಳಿದು ಸರ್ವರನ್ನು ಪ್ರೀತಿಯಿಂದ ಕಾಣಬೇಕಾಗಿದೆ. ನಮ್ಮ ಮಾತುಗಳು ಮುತ್ತಿನಂತೆ ಇರಬೇಕು, ಮಿತ ಹಾಗು ಮಧುರವಾಗಿರಬೇಕು, ಕಟುವಚನವಲ್ಲದೆ, ಸತ್ಯವಚನವಾಗಿರಬೇಕು. ಆದ್ದರಿಂದಲೇ ಹಿಂದಿ ಭಾಷೆಯಲ್ಲಿ 'ಗೂಡ ನಹಿ ದೋ ಲೆಕಿನ್ ಗೂಡ ಜೈಸಾ ಮಿಠಾ ತೊ ಬೋಲೊ' ಅಂದರೆ 'ಬೆಲ್ಲವನ್ನು ಕೊಡದೆ ಇದ್ದರೂ ಪರವಾಗಿಲ್ಲ ಬೆಲ್ಲದಂತೆ ಸಿಹಿ ಮಾತನಾಡಿ' ಎಂಬ ನಾಣ್ಣುಡಿ ಇದೆ. ನಮ್ಮಲ್ಲಿ 'ವಸುಧೈವ ಕುಟುಂಬಕಂ' ಎಂಬ ಭಾವನೆ ಜಾಗೃತವಾದಾಗ ಸ್ನೇಹ ಪ್ರೀತಿಯು ಸಹಜವಾಗಿ ಬೆಳೆಯುವುದು. ಆತ್ಮೀಕ ಭಾವನೆಯಿಂದ ಪರಸ್ಪರರಲ್ಲಿ ಮಧುರತೆ ಕಾಣುವುದು. ಸಂಕ್ರಾಂತಿ ಎಂದರೆ 'ಸಂ' ಸಂಸ್ಕಾರಗಳ ಕ್ರಾಂತಿ ಆಗಬೇಕು.

---- *ವಿಶ್ವಾಸ ಸೋಹೋನಿ., ಧಾರವಾಡ*